# ಜಂಬೂಕನ ಕಥೆ

■ ಕೌಂಡಿನ್ಯ ಕೊಡ್ಲುತೋಟ
ಕಲೆ: ಈಶ್ವರ ಬಡಿಗೇರ



ಪ್ರಸ್ತುತ ಹೆದ್ದಾರಿಯ ದಿಣ್ಣೆಯ ಮೇಲಿರುವ ನಾನು ಜಂಬೂಕ. ಜಂಬುನೇರಳೆ ಜಾತಿಗೆ ಸೇರಿದ ಮರ. ಜನಿಸಿ ಸುಮಾರು ಇನ್ನೂರೈವತ್ತರಿಂದ ಮುನ್ನೂರು ವರ್ಷಗಳಾಗಿರಬಹುದು. ನನಗೂ ಇಷ್ಟು ವರ್ಷಗಳಿಂದ ನಿಂತಲ್ಲೇ ನಿಂತು ಬೇಸರವಾಗುತ್ತಿದೆ. ಆದ್ದರಿಂದ ನಾನು ನನ್ನ ಆತ್ಮಕಥೆಯನ್ನು ಸಂಕ್ಷಿಪ್ತವಾಗಿ ಹೇಳಬಯಸುತ್ತೇನೆ.

ಮಲೆನಾಡಿನ ಮಳೆಕಾಡಿನಲ್ಲಿ ಹುಟ್ಟಿದವನು ನಾನು. ನನ್ನ ಪಕ್ಕದಲ್ಲಿದ್ದ ನನ್ನದೇ ಜಾತಿಯ ಮರಕ್ಕೆ ಅಜ್ಜಾ ಎಂದೇ ಸಂಬೋಧಿಸಿಕೊಂಡು ಬೆಳೆದಿದ್ದೆ. ಹಿಂಭಾಗದಲ್ಲಿ ಹರಿಯುತ್ತಿದ್ದ ತೊರೆಯ ಏಕತಾನದ ಹರಿವೇ ನಮಗೆ ಸುಂದರ ಗಾಯನವಾಗಿತ್ತು. ಈ ತೊರೆ ಇರುವ ಕಾರಣದಿಂದಲೋ ಏನೋ, ಅದೆಷ್ಟೋ ಪ್ರಾಣಿ–ಪಕ್ಷಿಗಳು ಈ ಪ್ರದೇಶಕ್ಕೆ ಬರುತ್ತಿದ್ದವು. ಕೆಲವು ಜಾತಿಯವು ನಾವು ಉದುರಿಸಿದ ಹಣ್ಣುಗಳನ್ನು ತಿಂದು, ಕಷ್ಟ–ಸುಖ ವಿಚಾರಿಸಿಕೊಂಡು ಹೋಗುತ್ತಿದ್ದವು. ಕಾಡುಕೋಣ, ಹುಲಿ, ಚಿರತೆ, ಜಿಂಕೆ, ಕಾಡುಹಂದಿ, ನರಿ, ಮೊಲ ಮುಂತಾದವು ನಮ್ಮ ತಾಣಕ್ಕೆ ಭೇಟಿ ನೀಡುತ್ತಿದ್ದ ದಿನನಿತ್ಯದ ಅತಿಥಿಗಳು. ಆಗಾಗ ಬರುತ್ತಿದ್ದ 'ಹೆಬ್ಬಾವು' ಬೇಟೆಯಾಡುತ್ತಿದ್ದ ರೀತಿ ನನಗೆ ತುಂಬಾ ಇಷ್ಟವಾಗುತ್ತಿತ್ತು. ಆದರೆ ಅದರ ಬಾಯಿಗೆ ಸಿಕ್ಕುತ್ತಿದ್ದ ಪ್ರಾಣಿಯ ಸ್ಥಿತಿ ನೋಡಿ ಹೊಟ್ಟೆ ಚುರ್‌ಗುಡುತ್ತಿದ್ದದ್ದೂ ಸುಳ್ಳಲ್ಲ.

ಆಗಿನ್ನೂ ನನ್ನದು ಪ್ರಾಯದ ವಯಸ್ಸು. ನಾನು, ಎದುರಿನ ಹಲಸು, ಪಕ್ಕದ ಮದ್ದಾಲೆ, ಹುಣಾಲು, ಹೊನ್ನೆ, ಮತ್ತಿ, ಬಿದಿರು... ಹೀಗೆ ನಮ್ಮದೆಲ್ಲಾ ಒಂದು ಗುಂಪು. ಈ ಗುಂಪಿಗೆ ನನ್ನ ಅಜ್ಜ ಜಂಬೂಕನೇ ನಾಯಕ. ಅವನು ಹೇಳುವ ಸುಂದರ ಕಥೆಗಳನ್ನು ಕೇಳುತ್ತಾ ಕಾಲ ಕಳೆಯುತ್ತಿದ್ದೆವು. ವಿಪರ್ಯಾಸವೆಂದರೆ ಆಗ ನಮಗ್ಯಾರಿಗೂ ಮನುಷ್ಯ ಎಂಬ ಪ್ರಾಣಿಯ ದರ್ಶನವೇ ಆಗಿರಲಿಲ್ಲ. ಆದರೆ ಇಲ್ಲಿಗೆ ಬರುವ ಪ್ರಾಣಿ ಪಕ್ಷಿಗಳಿಂದ ಮಾತ್ರ ನಾವು ಆ ಮನುಷ್ಯನ ಮತ್ತು ಅವನ ಕ್ರೌರ್ಯದ ಬಗ್ಗೆ ಕೇಳಿದ್ದೆವು. ಅದೊಂದು ದಿನ ಎಂದಿನಂತೆ ನಮ್ಮ ಮಾತುಕತೆ ನಡೆಯುತ್ತಿತ್ತು. ತೊರೆಯೂ ಪ್ರಶಾಂತಚಿತ್ತವಾಗಿ ಹಿನ್ನೆಲೆ ಸಂಗೀತ ನಡೆಸುತ್ತಿತ್ತು. ತನ್ನ ಹೆರೆಗಳ ತುಂಬಾ ತುಂಬಿಕೊಂಡ ಅದ್ಭುತ, ಬಲಾಢ್ಯ ಹಣ್ಣುಗಳನ್ನು ಹೊತ್ತಿದ್ದ ಹಲಸು ಖುಷಿಯಿಂದ ಉಬ್ಬಿಹೋಗಿತ್ತು. ಅದು ತನ್ನ ಫಲಗಳ ಬಗ್ಗೆ ಗುಣಗಾನ ಮಾಡುತ್ತಿತ್ತು. ಆಗ ಬಂದ ನೋಡಿ... ನಾವು ಹಿಂದೆಂದೂ ಕಂಡಿರದ ಮನುಷ್ಯ! ಅವನು ತನ್ನ ಹರಿತವಾದ ಆಯುಧದಿಂದ ಹಲಸಿನ ಮರದ ಎಲ್ಲಾ ಫಲಗಳನ್ನೂ ಕೊಯ್ದು ತನ್ನ ಚೀಲ ತುಂಬಿಸಿಕೊಂಡು ಅಲ್ಲಿಂದ ಮಾಯವಾದ. ಕ್ಷಣಾರ್ಧದಲ್ಲಿ ಹಲಸಿನ ಉತ್ಸಾಹ ಉಡುಗಿ ಅದು ಜಿನುಗಿಸಿದ ಕಣ್ಣೀರು ವರುಣನ ಸಾನಿಧ್ಯದಲ್ಲಿ ಕಾಣದೇ ಮರೆಯಾಗಿತ್ತು.